
ಕವಿತೆ




## ಸವಿತಾ ನಾಗಭೂಷಣ

ಕಲೆ: ರೂಪಶ್ರೀ ಕಲ್ಲಿಗನೂರು

# ಮಗು ಮತ್ತು ಹಕ್ಕಿ

ಆ ಹಕ್ಕಿ ರೆಂಬೆಯಿಂದ ಕೊಂಬೆಗೆ
ಕೊಂಬೆಯಿಂದ ರೆಂಬೆಗೆ ಏರಿತು ಹಾರಿತು
ಆ ಹಕ್ಕಿ ಪಟಪಟ ರಕ್ಕೆ ಬಡಿದು
ಮರದ ಬೊಡ್ಡೆಗೆ ಮುಸುಡಿ ತಿಕ್ಕಿ
ಕೊಕ್ಕನುಜ್ಜಿ ಸಾಪು ಮಾಡಿತು
ಆ ಹಕ್ಕಿ ಹುಳವ ಹೆಕ್ಕಿತು
ಹಣ್ಣ ಮುಕ್ಕಿತು...
ಬೆರಗುಗಣ್ಣಿನಿಂದ ಮಗು
ಅಮ್ಮನಿಗೆ ಕೇಳಿತು...
ಪಂಜರದಲ್ಲೇಕೆ ಇಲ್ಲವಿದು?
ತಾಯಿ ನುಡಿದಳು
ಹಕ್ಕಿಯ ಗುಣವೇ ಹಾರುವುದು
ತಡಿ... ನಿನಗೂ ತಿಳಿಯುವುದು!